# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 258 (357) |
| ಮಾನ್ಯ ಸದಸ್ಯರ ಹೆಸರು | : | ಶ್ರೀ ಶಶೀಲ್ ಜಿ ನಮೋಶಿ (ಶಿಕ್ಷಕರ ಕ್ಷೇತ್ರ) |
| ಉತ್ತರಿಸುವ ದಿನಾಂಕ | : | 06.03.2025 |
| ಉತ್ತರಿಸುವ ಸಚಿವರು. | : | ಗೃಹ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ದಿನಾಂಕ:16/11/2025ರಂದು ಬೀದರ್ ಜಿಲ್ಲೆಯಲ್ಲಿ ಹಗಲೇ ಎಸ್.ಬಿ.ಐ ಬ್ಯಾಂಕ್ ನಿಂದ ಎ.ಟಿ.ಎಂ ಗೆ ಹಣವನ್ನು ಸಾಗಿಸುವ ಸಮಯದಲ್ಲಿ ದರೋಡೆ ಕೋರರು ಗುಂಡಿನ ದಾಳಿ ನಡೆಸಿದ ಪರಿಣಾಮ ಎಸ್.ಬಿ.ಐ ನ ಸಿಎಂಸಿ ಕಂಪನಿಯ ಕ್ಯಾಶ್ ಕಸ್ಟೋಡಿಯನ್‌ಗಳಾದ ವೆಂಕಟೇಶ ಮಲ್ಲಪ್ಪ, ಇವರು ಸ್ಥಳದಲ್ಲೇ ಸಾವನ್ನಪ್ಪಿದ್ದು ಹಾಗೂ ಇನ್ನೋರ್ವರಾದ ಶಿವಕುಮಾರ್ ಕಾಶಿನಾಥ್ ರವರು ತೀವ್ರವಾಗಿ ಗಾಯಗೊಂಡಿದ್ದು, ಈ ಇಬ್ಬರಿಗೂ ಸರ್ಕಾರ ಯಾವ ಪರಿಹಾರವನ್ನು ನೀಡಿದೆ ; | ದಿನಾಂಕ: 16/01/2025 ರಂದು ಬೀದರ ಮಾರ್ಕೆಟ್ ಪೊಲೀಸ್ ಠಾಣೆಯ ಅಪರಾಧ ಸಂಖ್ಯೆ 04/2025 ಕಲಂ 309(4), 309(6), 311, 103, 109, 199 (1) ಜೊತೆ 3 (5) ಬಿ.ಎನ್.ಎಸ್, 25, 27 ಭಾರತೀಯ ಆಯುಧ ಕಾಯ್ದೆ ಮತ್ತು ಕಲಂ 3(2) (ವಿ), 3(2) (ವಿ-ಎ) ಎಸ್.ಸಿ/ಎಸ್‌ಟಿ ಪಿ.ಓ.ಎ ಕಾಯ್ದೆ ಅಡಿಯಲ್ಲಿ ಪ್ರಕರಣ ದಾಖಲಾಗಿದ್ದು, ಸದರಿ ಪ್ರಕರಣದಲ್ಲಿ ಮೃತನಾದ ಗಿರಿ ವೆಂಕಟೇಶ ಮಲ್ಲಪ್ಪ ಇವರ ಕುಟುಂಬಕ್ಕೆ ಸಮಾಜ ಕಲ್ಯಾಣ ಇಲಾಖೆ, ಬೀದರ್ ಜಿಲ್ಲೆಯಿಂದ ಮೊದಲನೆ ಕಂತಿನಲ್ಲಿ ರೂ 4,12,500/- ಗಳ ಪರಿಹಾರ ಧನ ಮಂಜೂರು ಮಾಡಲಾಗಿದೆ. ಮಾನ್ಯ ನ್ಯಾಯಾಲಯಕ್ಕೆ ಚಾರ್ಜ್‌ಶೀಟ್ ಸಲ್ಲಿಸಿದ ನಂತರ ರೂ 4,12,500/- ಗಳ ಪರಿಹಾರ ಧನ ಮಂಜೂರು ಮಾಡಲಾಗುವುದು, ಮೃತರ ತಾಯಿಗೆ ರೂ. 5000/- ಗಳ ಪಿಂಚಣಿ ಹಾಗೂ ಕುಟುಂಬದ ಸದಸ್ಯರಿಗೆ ನೌಕರಿ ನೀಡಲು ನಿಯಮಾನುಸಾರ ಪರಿಶೀಲಿಸಿ ಕ್ರಮ ಕೈಗೊಳ್ಳಲಾಗುವುದು.<br><br>ಶಿವಕುಮಾರ್ ಕಾಶಿನಾಥ್ ಇವರು ತೀವ್ರವಾಗಿ ಗಾಯಗೊಂಡಿದ್ದು, ಚಿಕಿತ್ಸೆಯನ್ನು ಪಡೆಯುತ್ತಿರುತ್ತಾರೆ. ವಾಸ್ತವಾಂಶದ ವರದಿ ಹಾಗೂ ಚಿಕಿತ್ಸಾ ವೆಚ್ಚದ ದಾಖಲೆಗಳನ್ನು ಪಡೆದು ಪರಿಹಾರ ವಿತರಿಸುವ ಕುರಿತು ಮುಖ್ಯಮಂತ್ರಿಯವರ ಪರಿಹಾರ ನಿಧಿಯಿಂದ ನಿಯಮಾನುಸಾರ ಪರಿಶೀಲಿಸಲಾಗುತ್ತದೆ. |

| | | |
|---|---|---|
| ಆ) | ದಾಳಿಗೀಡಾಗಿ ಸಾವನ್ನಪ್ಪಿದ ವೆಂಕಟೇಶ ಮಲ್ಲಪ್ಪ, ಹಾಗೂ ತೀವ್ರ ದಾಳಿಗೊಳಗಾಗಿದ್ದ ಶಿವಕುಮಾರ್ ಕಾಶಿನಾಥ್ ರವರು ತಮ್ಮ ಕುಟುಂಬ ನಿರ್ವಹಣೆಯ ಏಕ ಮಾತ್ರ ಜವಾಬ್ದಾರಿಯವರಾಗಿದ್ದು, ಈ ಪೈಕಿ ದಿವಂಗತ ವೆಂಕಟೇಶ ಮಲ್ಲಪ್ಪ ಅವರಿಗೆ ಸಮಾಜ ಕಲ್ಯಾಣ ಇಲಾಖೆಯಿಂದ 8 ಲಕ್ಷ ರೂಪಾಯಿ ಪರಿಹಾರ ಹಾಗೂ ಅವರ ತಾಯಿಗೆ ರೂ 5,000/-ಗಳ ಮಾಶಾಸನ ಕುಟುಂಬದ ಒಬ್ಬರಿಗೆ ಸಮಾಜ ಕಲ್ಯಾಣ ಇಲಾಖೆಯಿಂದ ಹೊರಗುತ್ತಿಗೆ ನೌಕರಿ ನೀಡುವುದಾಗಿ ಹಾಗೂ ಮುಖ್ಯಮಂತ್ರಿ ಪರಿಹಾರ ನಿಧಿಯಿಂದ 10 ಲಕ್ಷ ರೂಪಾಯಿ ಹೆಚ್ಚುವರಿ ಪರಿಹಾರ ಒದಗಿಸುವ ಭರವಸೆಯನ್ನು ಅಲ್ಲಿನ ಜಿಲ್ಲಾ ಉಸ್ತುವಾರಿ ಸಚಿವರು ನೀಡಿದ್ದು, ಇನ್ನೋರ್ವರಾದ ಶಿವಕುಮಾರ್ ಕಾಶಿನಾಥ್ ರವರ ಕುಟುಂಬವು ಕೂಡ ಸಂಪೂರ್ಣವಾಗಿ ಅವರ ಮೇಲೆ ಅವಲಂಬಿತವಾಗಿದ್ದರೂ ಕೂಡ ಅವರಿಗೆ ಇಲ್ಲಿಯವರೆಗೂ ಇಲಾಖೆಯಿಂದ ಆಗಲಿ ಅಥವಾ ಮುಖ್ಯಮಂತ್ರಿ ಪರಿಹಾರ ನಿಧಿಯಿಂದಾಗಲಿ ಯಾವುದೇ ಪರಿಹಾರವನ್ನು ನೀಡದೆ ಇರಲು ಕಾರಣವೇನು ;(ವಿವರ ನೀಡುವುದು) | ಪ್ರಕರಣದಲ್ಲಿ ಮೃತನಾದ ಗಿರಿ ವೆಂಕಟೇಶ ಮಲ್ಲಪ್ಪ ಇವರ ಕುಟುಂಬಕ್ಕೆ ಸಮಾಜ ಕಲ್ಯಾಣ ಇಲಾಖೆ, ಬೀದರ್ ಜಿಲ್ಲೆಯಿಂದ ಮೊದಲನೆ ಕಂತಿನಲ್ಲಿ ರೂ 4,12,500/- ಗಳ ಪರಿಹಾರ ಧನ ಮಂಜೂರು ಮಾಡಲಾಗಿದೆ. ಮಾನ್ಯ ನ್ಯಾಯಾಲಯಕ್ಕೆ ಚಾರ್ಜ್‌ಶೀಟ್ ಸಲ್ಲಿಸಿದ ನಂತರ ರೂ 4,12,500/- ಗಳ ಪರಿಹಾರ ಧನ ಮಂಜೂರು ಮಾಡಲಾಗುವುದು, ಮೃತರ ತಾಯಿಗೆ ರೂ. 5000/- ಗಳ ಪಿಂಚಣಿ ಹಾಗೂ ಕುಟುಂಬದ ಸದಸ್ಯರಿಗೆ ನೌಕರಿ ನೀಡಲು ನಿಯಮಾನುಸಾರ ಪರಿಶೀಲಿಸಿ ಕ್ರಮ ಕೈಗೊಳ್ಳಲಾಗುವುದು.<br><br>ಮುಖ್ಯ ಮಂತ್ರಿಯವರ ಪರಿಹಾರ ನಿಧಿಯಿಂದ ಹೆಚ್ಚುವರಿ ಪರಿಹಾರ ಒದಗಿಸುವ ಕುರಿತು ನಿಯಮಾನುಸಾರ ಪರಿಶೀಲಿಸಿ ಕ್ರಮ ಕೈಗೊಳ್ಳಲಾಗುತ್ತದೆ. |
| ಇ) | ಯಾವ ಕಾಲಮಿತಿಯಲ್ಲಿ ಶಿವಕುಮಾರ್ ಕಾಶಿನಾಥ್ ರವರಿಗೆ ಪರಿಹಾರ ಧನ ಹಾಗೂ ಕುಟುಂಬ ನಿರ್ವಹಣೆಗಾಗಿ ಒಬ್ಬ ಕುಟುಂಬ ಸದಸ್ಯರಿಗೆ ಹೊರಗುತ್ತಿಗೆ ಕೆಲಸ ನೀಡಲಾಗುವುದು ಹಾಗೂ ಕುಟುಂಬ ಸದಸ್ಯರೊಬ್ಬರಿಗೆ ಮಾಶಾಸನ ವ್ಯವಸ್ಥೆ ಮಾಡಲಾಗುತ್ತದೆಯೇ ? | ಶಿವಕುಮಾರ್ ಕಾಶಿನಾಥ್ ಇವರು ತೀವ್ರವಾಗಿ ಗಾಯಗೊಂಡಿದ್ದು, ಚಿಕಿತ್ಸೆಯನ್ನು ಪಡೆಯುತ್ತಿರುತ್ತಾರೆ. ವಾಸ್ತವಾಂಶದ ವರದಿ ಹಾಗೂ ಚಿಕಿತ್ಸಾ ವೆಚ್ಚದ ದಾಖಲೆಗಳನ್ನು ಪಡೆದು ಮುಖ್ಯಮಂತ್ರಿಯವರ ಪರಿಹಾರ ನಿಧಿಯಿಂದ ಪರಿಹಾರ ವಿತರಿಸುವ ಕುರಿತು ನಿಯಮಾನುಸಾರ ಪರಿಶೀಲಿಸಲಾಗುತ್ತದೆ |

ಸಂಖ್ಯೆ: ಹೆಚ್‌ಡಿ 10 ಪಿಸಿಕ್ಯೂ 2025

(ಡಾ: ಜಿ.ಪರಮೇಶ್ವರ)
ಗೃಹ ಸಚಿವರು